O.S. No.245/18 P.W. 1 Dated :05-07-2022.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀಸವಾಲು -ಶ್ರೀ. ಟಿ.ಎನ್ . 2 ನೇ ಪ್ರತಿವಾದಿ ಪರ ವಕೀಲರಿಂದ.

1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಮಗಳು . 2 ನೇ ಪ್ರತಿವಾದಿಗೂ 1 ನೇ ಪ್ರತಿವಾದಿ ಒಬ್ಬರೇ ಮಗಳು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಒಬ್ಬ ಸಹೋದರ ಮತ್ತು ಇಬ್ಬರು ಸಹ◌ೋದರಿಯರು ಇರುತ್ತಾರೆಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ತಮ್ಮ ಸ್ವತ್ತುಗಳನ್ನು ದಾನ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ತಮ್ಮ ವೈಯಕ್ತಿಕ ಕಾರಣಗಳಿಗಾಗಿ 1 ನೇ ಪ್ರತಿವಾದಿಗೆ ತಮ್ಮ ಸ್ವಯಾರ್ಜಿತ ಆಸ್ತಿಗಳನ್ನು ದಾನ ಮಾಡಿರುತ್ತಾರೆಂದರೆ ಸಾಕ್ಷಿಯು ಬಸವೇಗೌಡ ಬಿನ್ ಸೋಮೇಗೌಡರ ಆಸ್ತಿಯಾಗಿದ್ದು , ಸದರಿ ಸ್ವತ್ತಿಗೆ ಸಂಬಂಧಿಸಿದಂತೆ 2 ನೇ ಪ್ರತಿವಾದಿಗೆ ದಾನ ಮಾಡುವ ಹಕ್ಕು ಇರುವುದಿಲ್ಲ ಎಂದು ನುಡಿಯುತ್ತಾರೆ. 1993 ನೇ ಇಸವಿಗೂ ಮೊದಲು ದಾವಾ ಸ್ವತ್ತು ಬಸವೇಗೌಡರ ಸ್ವತ್ತಾಗಿದ್ದು , ನಂತರ 2 ನೇ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದ ಕಾರಣ ರೆವಿನ್ಯೂ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ದಾವಾ ಸ್ವತ್ತನ್ನು 2 ನೇ ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾಯಿಸಿರುತ್ತಾರೆಂದರೆ ಸಾಕ್ಷಿಯು 1995 ರಲ್ಲಿ ಬಸವೇಗೌಡರ ಹೇಳಿಕೆಯ ಆಧಾರದ ಮೇಲೆ 2 ನೇ ಪ್ರತಿವಾದಿಯು ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿಪಿ-6 ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆಯಾದ ಬಗ್ಗೆ ದಾಖಲೆ ಎಂದರೆ ಸರಿ . ಸೋಮೇಗೌಡರ ಹೇಳಿಕೆಯ ಮೇರೆಗೆ ನಿಪಿ-6 ರಂತೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-4 ರಂತೆ 2 ನೇ ಪ್ರತಿವಾದಿಗೆ 1996-97 ರಲ್ಲಿ ದಾವಾ ಸ್ವತ್ತಿನ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-4 ಅನ್ನು ನಾನೇ ಹಾಜರುಪಡಿಸಿರುತ್ತೇನೆಂದರೆ ಸರಿ . ನಿಪಿ-7 ರ ವಂಶವೃಕ್ಷದ ಪ್ರಕಾರ ಬಸವೇಗೌಡರಿಗೆ ಪಾರ್ವತಮ್ಮ ಎಂಬ

ಮಗಳು ಇರುತ್ತಾಳೆಂದರೆ ಸರಿಯಲ್ಲ. ಬಸವೇಗೌಡರಿಗೆ ದಾವಾ ಸ್ವತ್ತು ಮಂಜೂರಾಗಿತ್ತು ಎಂದರೆ ಸರಿ . 1993 ರವರೆಗೂ ದಾವಾ ಸ್ವತ್ತು ಬಸವೇಗೌಡರಿಗೆ ಸೇರಿತ್ತು ಎಂದರೆ ಸಾಕ್ಷಿಯು ಇಂದಿನವರೆಗೂ ಅವರಿಗೆ ಸೇರಿತ್ತು ಎಂದು ನುಡಿಯುತ್ತಾರೆ. ದಿಃ14-05-1993 ರಂದು ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿರುತ್ತಾರೆಂದರೆ ಸರಿಯಲ್ಲ . ದಾವಾ ಸ್ವತ್ತಿನ ಪಕ್ಕದಲ್ಲಿ ಸ.ನಂ. 14 ಮತ್ತು 6 ರಲ್ಲಿ ಕೃಷ್ಣೇಗೌಡರಿಗೆ ಸೇರಿದ ಸ್ವತ್ತು ಇರುತ್ತದೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದಾವಾ ಸ್ವತ್ತಿನ ಪಕ್ಕದಲ್ಲಿ ನಮ್ಮ ಜಮೀನು ಇರುತ್ತದೆಂದು ನುಡಿಯುತ್ತಾರೆ. ಸ.ನಂ. 14 ಕ್ಕೆ ಸಂಬಂಧಿಸಿದಂತೆ ನನ್ನ ಅಜ್ಜನ ಹೆಸರಿನಲ್ಲಿ ದಾಖಲೆಗಳಿವೆ . ದಾವಾ ಸ್ವತ್ತಿನ ಪಕ್ಕದಲ್ಲಿ ಸ.ನಂ. 79 ಮತ್ತು 80 ರ ಸ್ವತ್ತುಗಳಿವೆ ಎಂದರೆ ಸರಿ . ಆ ಜಮೀನುಗಳಲ್ಲಿ 2 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸ.ನಂ. 79,80 ರ ಜಮೀನಿನ ಮಾಲೀಕರ ಮುಖಾಂತರ ನಾನೇ ಜಿ ಪಿ ಎ ಹೋಲ್ಡರ್ ಆಗಿ ಪ್ರತಿವಾದಿಗಳ ವಿರುದ್ಧ ದಾವೆ ಹೂಡಿರುತ್ತೇನೆಂದರೆ ಸರಿ . ಜಮೀನಿನ ಮಾಲೀಕರಿಗೆ ಇಷ್ಟವಿಲ್ಲದಿದ್ದರೂ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ನಾನೇ 2 ನೇ ಪ್ರತಿವಾದಿಯ ವಿರುದ್ಧ ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ಈ ಸ. ನಂ. 78,79,80 ರ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನೇ ಎ ಸಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದೇನೆಂದರೆ ಸರಿ . ಸದರಿ ದಾವೆಗಳು ವಜಾಗೊಡಿದ್ದವೆಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸದರಿ ದಾವೆಯನ್ನು ಹು ಾಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗಳೇ ಇಂದಿಗೂ ಸಹ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದರೂ ಸಹ ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ದಾವಾ ಹೂಡಿದ್ದೇನೆಂದರೆ ಸರಿಯಲ್ಲ. 1993 ರಿಂದಲೂ ದಾವಾ ಸ್ವತ್ತಿನ ಮಾಲೀಕರಿಂದ ಅಡ್ಡಿ ಆತಂಕಗಳಿಲ್ಲದೆ ಪ್ರತಿವಾದಿಗಳೇ ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗು ದಾವಾ ಸ್ವತ್ತಿನಲ್ಲಿ ತೆಂಗು , ತೇಗ , ಬಾಳೆ , ಹೆಬ್ಬೇವು , ಸಪೋಟ ಮರಗಳನ್ನು ಬೆಳೆಸಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಮರಗಳನ್ನು ಬೆಳೆಸಲು ಸಂಬಂಧಿಸಿದ ಇಲಾಖೆಯಿಂದ ಪ್ರೋತ್ಸಾಹಧನ ಸಹಾಯ ಪಡೆದಿರುತ್ತಾರೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.